# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003**

ಸಂಖ್ಯೆ:ಕೆ2/ ಎನ್.ಎಸ್.ಕ್ಯೂ.ಎಫ್-ಮಾರ್ಗಸೂಚಿ/2023-24 ದಿನಾಂಕ:03/11/2023

## ಮಾರ್ಗಸೂಚಿ

**ವಿಷಯ:-** 2024ರ ಮಾರ್ಚ್/ಏಪ್ರಿಲ್ ಮಾಹೆಯ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಯಲ್ಲಿ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು (ಎನ್.ಎಸ್.ಕ್ಯೂ.ಎಫ್) ಪರೀಕ್ಷಾ ಪ್ರಕ್ರಿಯೆ ಕುರಿತು ಮಾರ್ಗಸೂಚಿ.

ಉಲ್ಲೇಖ:-1) ಸರ್ಕಾರದ ಆದೇಶದ ಸಂಖ್ಯೆ:ಇಡಿ.59.ಎಂ.ಸಿ.ಡಿ.2016, ಬೆಂಗಳೂರು,ದಿನಾಂಕ:16.06.2016.
2) ಸರ್ಕಾರದ ಆದೇಶದ ಸಂಖ್ಯೆ: ಇಪಿ 33 ಎಂ.ಸಿ.ಡಿ. 2020, ಬೆಂಗಳೂರು, ದಿನಾಂಕ: 01-01-2021
3) ಮಂಡಳಿ ಅಧಿಸೂಚನೆ ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಮಾರ್ಚ್-24/14/ 2023-24, ದಿನಾಂಕ:04/10/2023
4) ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು. ಇವರ ಪತ್ರ ಸಂಖ್ಯೆ:VE/9/2023-24 ದಿನಾಂಕ:31-10-2023.

********

ಸರ್ಕಾರದ ಆದೇಶ ಸಂಖ್ಯೆ:ಇಪಿ 203 ಎಸ್ಎಲ್‌ಬಿ 2023 ದಿನಾಂಕ:21.09.2023ರನ್ವಯ 2023-24ನೇ ಸಾಲಿನಿಂದ ಜಾರಿಗೆ ಬರುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ವತಿಯಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಪರೀಕ್ಷೆ-1, ಪರೀಕ್ಷೆ-2 ಮತ್ತು ಪರೀಕ್ಷೆ-3 ಎಂದು ಹೆಸರಿಸಿ ಪರೀಕ್ಷೆಯನ್ನು ನಡೆಸಲಾಗುವುದು.

2024ರ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆ-1ಕ್ಕೆ ಎನ್.ಎಸ್.ಕ್ಯೂ.ಎಫ್ ವಿಷಯ ಅಳವಡಿತ ಒಟ್ಟು 267 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಶಾಲೆಗಳಿಂದ ಹಾಜರಾಗುವ ಅರ್ಹ ವಿದ್ಯಾರ್ಥಿಗಳನ್ನು ನೋಂದಾಯಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಶಾಲೆಗಳಿಂದ ಮುಖ್ಯ ಶಿಕ್ಷಕರು ತಮ್ಮ ಶಾಲೆಯಿಂದ 2024ರ ಎಸ್.ಎಸ್.ಎಲ್.ಸಿ ಪರೀಕ್ಷೆ-1ಕ್ಕೆ ಹಾಜರಾಗುವ ಎನ್.ಎಸ್.ಕ್ಯೂ.ಎಫ್‌ನ ಅರ್ಹ ಶಾಲಾ ವಿದ್ಯಾರ್ಥಿಗಳ (**CCERF**) ಮತ್ತು ಪುನರಾವರ್ತಿತ ಅಭ್ಯರ್ಥಿಗಳ (**CCERR**) ನೋಂದಣಿಗೆ ಸಂಬಂಧಿಸಿದಂತೆ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ದಿನಾಂಕ:04.10.2023ರ ಪರೀಕ್ಷಾ ಮಾರ್ಗಸೂಚಿಯಂತೆ ಮಂಡಲಿಯು ತಿಳಿಸಿರುವ ದಿನಾಂಕದಲ್ಲಿ ಶಾಲಾ ಲಾಗಿನ್‌ನಲ್ಲಿ ನೋಂದಣಿ ಮಾಡಲು ಕ್ರಮವಹಿಸುವುದು.

ಎನ್.ಎಸ್.ಕ್ಯೂ.ಎಫ್ ಪಠ್ಯಕ್ರಮವು ವಿದ್ಯಾರ್ಥಿಗಳನ್ನು ಪ್ರಗತಿಶೀಲರನ್ನಾಗಿಸಲು, ಸರ್ವತೋಮುಖ ಅಭಿವೃದ್ಧಿಗೆ ಪ್ರೇರೇಪಿಸಲು ಹಾಗೂ ವಿದ್ಯಾರ್ಥಿಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಮಹತ್ತರವಾದ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ಯೋಜನೆಯು ನಿರಂತರ ಮುಂದುವರಿಕೆ ಯೋಜನೆಯಾಗಿದ್ದು, ಸರ್ಕಾರದ ಮಾರ್ಗಸೂಚಿಯ ಪ್ರಕಾರ ಸಮಗ್ರ ಶಿಕ್ಷಣ-ಕರ್ನಾಟಕ ಅಡಿಯಲ್ಲಿ ಅನುಷ್ಠಾನ ಮಾಡಲು ಅವಕಾಶ ಕಲ್ಪಿಸಿದೆ. ಈ ಯೋಜನೆಯ ಮುಖ್ಯ ಉದ್ದೇಶ ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣದ ವಿಷಯಗಳನ್ನು ವಿದ್ಯಾರ್ಥಿಗಳ ಆಸಕ್ತಿಗನುಗುಣವಾಗಿ ಅಳವಡಿಸಿ, ಉದ್ಯೋಗ ನಿರ್ವಹಿಸಲು ಅಗತ್ಯ ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ಬಗ್ಗೆ ತರಬೇತಿಯನ್ನು ನೀಡುವುದಾಗಿದೆ.

ಪ್ರಾರಂಭದಿಂದ **ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೊಬೈಲ್, ಬ್ಯೂಟಿ ಮತ್ತು ವೆಲ್‌ನೆಸ್** ಸೆಕ್ಟಾರ್‌ಗಳನ್ನು ಈ ಯೋಜನೆಯಲ್ಲಿ ಅಳವಡಿಸಲಾಗಿದೆ. 2022-23ನೇ ಸಾಲಿನಿಂದ 9ನೇ ತರಗತಿಯಿಂದ **ಅಪ್ಯಾರಲ್ಸ್, ಮೇಡ್ ಅಪ್ಸ್ & ಹೋಮ್ ಫರ್ನಿಷಿಂಗ್ ಮತ್ತು ಎಲೆಕ್ಟ್ರಾನಿಕ್ಸ್ & ಹಾರ್ಡ್‌ವೇರ್** ಈ ಎರಡು ಹೊಸ ಸೆಕ್ಟಾರ್‌ಗಳನ್ನು ಅಳವಡಿಸಲಾಗಿದೆ. ಆಯ್ಕೆಯಾದ ಪ್ರೌಢ

ಶಾಲೆಗಳಲ್ಲಿ ಯಾವುದಾದರೂ ಎರಡು ಸೆಕ್ಟಾರ್‌ಗಳನ್ನು ಅಳವಡಿಸುವುದು ಹಾಗೂ ಪ್ರತಿ ಹಂತದ ಪ್ರತಿ ಸೆಕ್ಟಾರ್‌ಗೆ ಗರಿಷ್ಠ 25 ವಿದ್ಯಾರ್ಥಿಗಳನ್ನು ದಾಖಲಿಸುವುದು. ಆಂತರಿಕ ಮೌಲ್ಯಮಾಪನಕ್ಕೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ(Continuous and Comprehensive Evaluation) ಪದ್ಧತಿಯನ್ನು ಅಳವಡಿಸಿಕೊಳ್ಳುವುದು. 2023-24ನೇ ಸಾಲಿನಿಂದ 10ನೇ ತರಗತಿಯ ವಿದ್ಯಾರ್ಥಿಗಳೂ ಸಹ ಮೊದಲ ಬಾರಿಗೆ ಈ ಎರಡು ಹೊಸ ಸೆಕ್ಟಾರ್‌ಗಳನ್ನೊಳಗೊಂಡಂತೆ ಪರೀಕ್ಷೆಯನ್ನು ತೆಗೆದುಕೊಳ್ಳುವುದು.

ಸರ್ಕಾರದ ಆದೇಶದ ಸಂಖ್ಯೆ:ಇಡಿ.59.ಎಂ.ಸಿ.ಡಿ.2016, ದಿನಾಂಕ:16.06.2016 ರನ್ವಯ ರಾಜ್ಯದ ಆಯ್ದ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ಯೋಜನೆಯಡಿ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಪರೀಕ್ಷಾ ಪದ್ಧತಿಯಲ್ಲಿ ಕೆಳಕಂಡ ಬದಲಾವಣೆ ಮಾಡಿಕೊಳ್ಳಲು ನಿರ್ದೇಶಕರು(ಪರೀಕ್ಷೆಗಳು), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಕೆಳಕಂಡ ಷರತ್ತುಗಳಂತೆ ಅನುಮತಿಸಿ ಆದೇಶಿಸಲಾಗಿದೆ.

<u>ಷರತ್ತುಗಳು</u>:-

1. 9 ಮತ್ತು 10ನೇ ತರಗತಿಯಲ್ಲಿ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಯು ತೃತೀಯ ಭಾಷೆಯ ಬದಲು ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೊಬೈಲ್, ಬ್ಯೂಟಿ & ವೆಲ್‌ನೆಸ್ ಹಾಗೂ ಎರಡು ಹೊಸ ಸೆಕ್ಟಾರ್‌ಗಳಾದ ಅಪ್ಪಾರಲ್ಸ್, ಮೇಡ್ ಅಪ್ಸ್ & ಹೋಮ್ ಫರ್ನಿಷಿಂಗ್ ಮತ್ತು ಎಲೆಕ್ಟ್ರಾನಿಕ್ಸ್ & ಹಾರ್ಡ್‌ವೇರ್ ಗಳಿಂದಲೂ ಯಾವುದಾದರೂ ಒಂದು ಸೆಕ್ಟಾರ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.
2. ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ತಾತ್ವಿಕ(ಥಿಯರಿ) ಪರೀಕ್ಷೆಯನ್ನು ಪರೀಕ್ಷಾ ಮಂಡಳಿಯು ಹಾಗೂ ಪ್ರಾಯೋಗಿಕ ಪರೀಕ್ಷೆಯನ್ನು ಸೆಕ್ಟರ್ ಸ್ಕಿಲ್ ಕೌನ್ಸಿಲ್ ಸಂಸ್ಥೆಗಳ ಮೂಲಕ ನಡೆಸಲಾಗುವುದು.
3. ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಕೆಳಗಿನಂತೆ ಪರೀಕ್ಷೆಗಳನ್ನು ನಡೆಸಲಾಗುವುದು:-
   ಎ) ಆಂತರಿಕ ಮೌಲ್ಯಮಾಪನ -20 ಅಂಕಗಳು
   ಬಿ) ತಾತ್ವಿಕ(ಥಿಯರಿ)ಪರೀಕ್ಷೆ -30 ಅಂಕಗಳು
   ಸಿ) ಪ್ರಾಯೋಗಿಕ ಪರೀಕ್ಷೆ -50 ಅಂಕಗಳು
4. ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಅಯಾ ವಿಷಯದಲ್ಲಿ ತೇರ್ಗಡೆಯಾಗಲು ತಾತ್ವಿಕ ಪರೀಕ್ಷೆಯಲ್ಲಿ ಕನಿಷ್ಠ 10 ಅಂಕಗಳನ್ನು ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಕನಿಷ್ಠ 18 ಅಂಕಗಳನ್ನು ಗಳಿಸಬೇಕು. ಆಂತರಿಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ವಿದ್ಯಾರ್ಥಿಗೆ ನೀಡಲಾಗುವ ಪ್ರಮಾಣ ಪತ್ರದಲ್ಲಿ ನಮೂದಿಸಲಾಗುವುದು. ಇದನ್ನು ತೇರ್ಗಡೆಗೆ ಪರಿಗಣಿಸಲಾಗುವುದಿಲ್ಲ.
5. ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ನೀಡುವಾಗ ಪ್ರಸ್ತುತ ಒಂದೇ ಅಂಕಪಟ್ಟಿ ಪದ್ಧತಿಯನ್ನು ಮುಂದುವರೆಸುವುದು ಹಾಗೂ ಅದರಲ್ಲಿ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳತಕ್ಕದ್ದು.
6. ವೃತ್ತಿ ಶಿಕ್ಷಣದ ತಾತ್ವಿಕ ಪರೀಕ್ಷೆಯಲ್ಲಿ ಅಭ್ಯರ್ಥಿಯು ತೇರ್ಗಡೆ ಹೊಂದದಿದ್ದಲ್ಲಿ ಪೂರಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗುವುದು.
7. ತಾತ್ವಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ, ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಪುನರಾವರ್ತಿತ ಅಭ್ಯರ್ಥಿಯಾಗಿ ತಾತ್ವಿಕ ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಪುನ: ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.
8. ತಾತ್ವಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಲ್ಲಿ, ಪೂರಕ ಪರೀಕ್ಷೆ ಇರುವುದಿಲ್ಲ. ಆದ್ದರಿಂದ ಪುನರಾವರ್ತಿತ ಅಭ್ಯರ್ಥಿಯಾಗಿ ಮುಂದಿನ ಮುಖ್ಯ ಪರೀಕ್ಷೆಯಲ್ಲಿ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವುದು.
   - ಈ ನಿಟ್ಟಿನಲ್ಲಿ ಶಾಲಾ ಮುಖ್ಯ ಶಿಕ್ಷಕರು ವಿದ್ಯಾರ್ಥಿಗಳ Project work/Portfolio/ ಆಂತರಿಕ ಮೌಲ್ಯಮಾಪನ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವುದು ಮತ್ತು ಪೂರ್ವಸಿದ್ಧತೆ ಮಾಡಿಕೊಳ್ಳುವುದು. ಎಲ್ಲಾ ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಪರೀಕ್ಷೆಗೆ ಹಾಜರುಪಡಿಸುವುದು ಆಯಾ ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ. ಪೂರಕ ಪರೀಕ್ಷೆಯಲ್ಲಿ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗುವುದಿಲ್ಲ. ವಿದ್ಯಾರ್ಥಿಗಳು ಮುಖ್ಯ ಪರೀಕ್ಷೆಗೆ ಗೈರುಹಾಜರಾದರೆ ಮುಖ್ಯ ಶಿಕ್ಷಕರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.
9. ವೃತ್ತಿ ಶಿಕ್ಷಣದ ವಿಷಯವನ್ನು ವಿನಾಯಿತಿ ಪಡೆದ ತೃತೀಯ ಭಾಷೆಗೆ ಸಮಾನಾಂತರ ಎಂದು ಪರಿಗಣಿಸಲಾಗುವುದು.

1.ಭಾಷಾ ವಿನಾಯಿತಿ:-

ಈ ಯೋಜನೆಯನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಅವರು ವ್ಯಾಸಂಗ ಮಾಡುವ ತರಗತಿಯ ಒಂದು ವಿಷಯದಲ್ಲಿ ವಿನಾಯಿತಿ ನೀಡುವಂತೆ ಕೇಂದ್ರ ಸರ್ಕಾರ ತಿಳಿಸಿರುತ್ತದೆ. ಈ ಸಂಬಂಧ ಉಲ್ಲೇಖ-1ರ ಸರ್ಕಾರಿ ಆದೇಶದನ್ವಯ ಕೆಳಕಂಡಂತೆ ಒಂದು ಭಾಷಾ ವಿಷಯದಲ್ಲಿ ವಿನಾಯಿತಿಯನ್ನು ನೀಡಲು ನಿರ್ಧರಿಸಿದೆ.

**9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ – ತೃತೀಯ ಭಾಷೆ ಅಭ್ಯಾಸ ಮಾಡುವುದರಿಂದ ವಿನಾಯತಿ:**

(a)9ನೇ ತರಗತಿ (ಮೊದಲನೇ ಹಂತ) **(Level-1)**

| ಕ್ರಸಂ. | ವಿಷಯ | ಅಂಕಗಳು |
|---|---|---|
| 1 | ಪ್ರಥಮ ಭಾಷೆ | 100 |
| 2 | ದ್ವಿತೀಯ ಭಾಷೆ | 100 |
| 3 | ತೃತೀಯ ಭಾಷೆ ಬದಲಿಗೆ ವೃತ್ತಿ ಶಿಕ್ಷಣದ ಒಂದು ವಿಷಯ | 100 |
| 4 | ಗಣಿತ | 100 |
| 5 | ಸಮಾಜ ವಿಜ್ಞಾನ | 100 |
| 6 | ವಿಜ್ಞಾನ | 100 |
| | ಒಟ್ಟು ಅಂಕಗಳು | **600** |

*9ನೇ ತರಗತಿಯಲ್ಲಿ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಅಯಾ ವಿಷಯದಲ್ಲಿ ತೇರ್ಗಡೆಯಾಗಲು ತಾತ್ವಿಕ ಪರೀಕ್ಷೆಯಲ್ಲಿ ಕನಿಷ್ಟ 10 ಅಂಕಗಳನ್ನು ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಕನಿಷ್ಠ 18 ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ತಾತ್ವಿಕ ಪರೀಕ್ಷೆಯು 60 ಅಂಕಗಳಿಗೆ ನಡೆಸುವುದು. ಅಭ್ಯರ್ಥಿಯು 60 ಅಂಕಗಳಿಗೆ ಗಳಿಸಿದ ಅಂಕಗಳನ್ನು 30 ಅಂಕಗಳಿಗೆ ಭಾಗಿಸಿ ಅಂಕಗಳನ್ನು ನೀಡುವುದು. (ಅಂದರೆ 60 ಅಂಕಗಳಿಗೆ ಅಭ್ಯರ್ಥಿಯು 30 ಅಂಕಗಳಿಸಿದ್ದಲ್ಲಿ, ಅದನ್ನು 30 ಅಂಕಗಳಿಗೆ 15 ಅಂಕಗಳು ಎಂದು ಲೆಕ್ಕ ಹಾಕುವುದು.)

* ಅಭ್ಯರ್ಥಿಯು 9ನೇ ತರಗತಿಯ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ವಿಷಯದ ತಾತ್ವಿಕ, ಪ್ರಾಯೋಗಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮಾಹಿತಿಯನ್ನು ಆಯಾ ಶಾಲಾ ಮುಖ್ಯ ಶಿಕ್ಷಕರು ಕ್ರೋಢೀಕೃತ ಅಂಕಗಳ ವಹಿಯಲ್ಲಿ ನಮೂದಿಸಿ ನಿರ್ವಹಿಸುವುದು. ಹಾಗೂ ವಿದ್ಯಾರ್ಥಿಯು ಗಳಿಸಿದ ಅಂಕಗಳ ವಿವರವನ್ನು ಕೆ.ಎಸ್.ಇ.ಎ.ಬಿ ಶಾಲಾ ಲಾಗಿನ್‌ನಲ್ಲಿ ದಾಖಲಿಸುವುದು.

(b) 10ನೇ ತರಗತಿ (ಎರಡನೇ ಹಂತ) **(Level-2)**

| ಕ್ರಸಂ. | ವಿಷಯ | ಅಂಕಗಳು |
|---|---|---|
| 1 | ಪ್ರಥಮ ಭಾಷೆ | 125 |
| 2 | ದ್ವಿತೀಯ ಭಾಷೆ | 100 |
| 3 | ತೃತೀಯ ಭಾಷೆ ಬದಲಿಗೆ ವೃತ್ತಿ ಶಿಕ್ಷಣದ ಒಂದು ವಿಷಯ | 100 |
| 4 | ಗಣಿತ | 100 |
| 5 | ಸಮಾಜ ವಿಜ್ಞಾನ | 100 |
| 6 | ವಿಜ್ಞಾನ | 100 |
| | ಒಟ್ಟು ಅಂಕಗಳು | **625** |

ವೃತ್ತಿ ಶಿಕ್ಷಣ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಯು ತೃತೀಯ ಭಾಷೆಯ ಬದಲು ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೊಬೈಲ್, ಬ್ಯೂಟಿ & ವೆಲ್‌ನೆಸ್, ಅಪರಲ್ಸ್ ಮೇಡ್ ಅಪ್ಸ್ & ಹೋಮ್ ಫರ್ನಿಷಿಂಗ್ ಹಾಗೂ ಎಲೆಕ್ಟ್ರಾನಿಕ್ಸ್ & ಹಾರ್ಡ್‌ವೇರ್ ಸೆಕ್ಟಾರ್‌ಗಳಲ್ಲಿ ಈ ಹಿಂದೆ ಅಂದರೆ 9ನೇ ತರಗತಿಯಲ್ಲಿ ಆಯ್ಕೆ ಮಾಡಿಕೊಂಡ ಸೆಕ್ಟಾರ್‌ನಲ್ಲಿಯೇ

ಮುಂದುವರೆಯುವುದು. 9ನೇ ತರಗತಿಯಲ್ಲಿ ತೃತೀಯ ಭಾಷೆಯ ಬದಲಾಗಿ ಆಯ್ಕೆ ಮಾಡಿಕೊಂಡ ವಿಷಯವನ್ನೇ 10ನೇ ತರಗತಿಯಲ್ಲಿಯೂ ತೆಗೆದುಕೊಳ್ಳುವುದು. ಬದಲಾವಣೆಗೆ ಅವಕಾಶವಿರುವುದಿಲ್ಲ.

2023-24ನೇ ಶೈಕ್ಷಣಿಕ ವರ್ಷದಲ್ಲಿ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ಯೋಜನೆಯಡಿಯಲ್ಲಿ ವೃತ್ತಿ ಶಿಕ್ಷಣಕ್ಕೆ ಹಂತ-1 ಮತ್ತು ಹಂತ-2ರಲ್ಲಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ವೃತ್ತಿ ಶಿಕ್ಷಣದ ವಿಷಯಗಳಾದ ಮಾಹಿತಿ ತಂತ್ರಜ್ಞಾನ, ರೀಟೆಲ್, ಆಟೋಮೊಬೈಲ್, ಬ್ಯೂಟಿ ಅಂಡ್ ವೆಲ್‌ನೆಸ್, ಆಪರಲ್ಸ್ ಮೇಡ್ ಅಪ್ಸ್ & ಹೋಮ್ ಫರ್ನಿಷಿಂಗ್ ಹಾಗೂ ಎಲೆಕ್ಟ್ರಾನಿಕ್ಸ್ & ಹಾರ್ಡ್‌ವೇರ್ ಈ ವಿಷಯಗಳಿಗೆ 9ನೇ ತರಗತಿಗೆ ಹಾಗೂ 10ನೇ ತರಗತಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ವತಿಯಿಂದ ಪರೀಕ್ಷೆಯನ್ನು ನಡೆಸಲಾಗುವುದು.

2023-24ನೇ ಶೈಕ್ಷಣಿಕ ವರ್ಷಕ್ಕೆ 2024ರ ಮಾರ್ಚ್/ಏಪ್ರಿಲ್ ಮಾಹೆಯ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಉಲ್ಲೇಖ(3)ರಂತೆ ದಿನಾಂಕ:04/10/2023ರಂದು ಮಂಡಳಿ ಹೊರಡಿಸಿದ ಮಾರ್ಗಸೂಚಿಯಲ್ಲಿ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡಲಾಗಿದೆ. ಅದರಂತೆ 9 ಮತ್ತು 10ನೇ ತರಗತಿಗೆ ಸಂಬಂಧಿಸಿದ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ವಿದ್ಯಾರ್ಥಿಗಳ ವಿವರಗಳನ್ನು ಮಂಡಲಿಯ ಜಾಲತಾಣದ ಶಾಲಾ ಲಾಗಿನ್‌ನಲ್ಲಿ ದಾಖಲಿಸುವುದು.

ಹಂತ-1ರ (9ನೇ ತರಗತಿ) ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ತಾತ್ವಿಕ ಆಂತರಿಕ ಹಾಗೂ ಪ್ರಾಯೋಗಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಗಳಿಸಿದ ಅಂಕಗಳ ವಿವರವನ್ನು ಕೆ.ಎಸ್.ಇ.ಎ.ಬಿ ಶಾಲಾ ಲಾಗಿನ್‌ನಲ್ಲಿ ದಾಖಲಿಸುವುದು.

**2(C). ಪರೀಕ್ಷಾ ಪದ್ಧತಿ:-**

1. 9ನೇ ತರಗತಿಯ ತಾತ್ವಿಕ ಪರೀಕ್ಷೆಯ ಮಾದರಿ ಪ್ರಶ್ನೆ ಪತ್ರಿಕೆಯನ್ನು ಆಯಾ ಮುಖ್ಯ ಶಿಕ್ಷಕರ ಲಾಗಿನ್‌ಗೆ ಅಥವಾ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳ ಅವರ ಲಾಗಿನ್‌ಗಳಿಗೆ ಬಿಡುಗಡೆ ಮಾಡಲಾಗುವುದು.
2. ಹಂತ-1ರ ವೃತ್ತಿ ಶಿಕ್ಷಣ ಸೆಕ್ಟಾರ್ ತರಬೇತುದಾರರು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದು ಹಾಗೂ ಮೌಲ್ಯಮಾಪನ ಮಾಡಿದ ಅಂಕಗಳ ಪಟ್ಟಿಯನ್ನು ಸಂಬಂಧಿಸಿದ ಶಾಲಾ ಮುಖ್ಯಸ್ಥರುಗಳಿಗೆ ನೀಡಬೇಕಾಗುತ್ತದೆ. ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ತಾತ್ವಿಕ ಪರೀಕ್ಷೆ ಮತ್ತು ಆಂತರಿಕ ಮೌಲ್ಯಮಾಪನದ ಅಂಕಗಳೊಡನೆ ಸಮೀಕರಿಸಿ ಫಲಿತಾಂಶವನ್ನು ಪ್ರಕಟಿಸಿ ಅಂಕಪಟ್ಟಿಯನ್ನು ನೀಡುವುದು. ಹಾಗೂ ಮಂಡಲಿಯ ಮುಂದಿನ ನಿರ್ದೇಶನದಂತೆ ಕ್ರಮವಹಿಸುವುದು.
3. 10ನೇ ತರಗತಿಗೆ ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯ ನಿರ್ಣಯ ಮಂಡಲಿಯು ತಾತ್ವಿಕ ಪರೀಕ್ಷೆಯನ್ನು ಹಾಗೂ ಪ್ರಾಯೋಗಿಕ ಪರೀಕ್ಷೆಯನ್ನು ಸಂಬಂಧಪಟ್ಟ ಸೆಕ್ಟಾರ್ ಸ್ಕಿಲ್ ಕೌನ್ಸಿಲ್ ಸಂಸ್ಥೆಗಳ ಮೂಲಕ ನಡೆಸುವುದು.
4. 10ನೇ ತರಗತಿಯ ವಿದ್ಯಾರ್ಥಿಗಳು ತೃತೀಯ ಭಾಷೆಗೆ ಪರ್ಯಾಯವಾಗಿ Sector Skill ವಿಭಾಗದಲ್ಲಿನ ಒಂದು ವಿಷಯದ ಪ್ರಾಯೋಗಿಕ ಪರೀಕ್ಷೆಯನ್ನು Skill Sector council ಸಂಸ್ಥೆಯ ಮುಖೇನ ಅಧಿಕೃತ ತರಬೇತುದಾರರು ಮೌಲ್ಯಮಾಪನ ಮಾಡುವವರು ಹಾಗೂ ವಿದ್ಯಾರ್ಥಿಯು ಗಳಿಸಿದ ಅಂಕಗಳ ವಿವರವನ್ನು ನೇರವಾಗಿ ಮಂಡಲಿಯು ಕಲ್ಪಿಸುವ ಶಾಲಾ ಲಾಗಿನ್‌ಗೆ ನಮೂದಿಸುವರು. ಮಂಡಲಿಯು ವಿದ್ಯಾರ್ಥಿಯು ತಾತ್ವಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು, Skill Sector council ರವರಿಂದ ಸ್ವೀಕರಿಸಲ್ಪಟ್ಟ ಪ್ರಾಯೋಗಿಕ ಅಂಕಗಳು ಹಾಗೂ ಶಾಲೆಗಳಿಂದ ಸ್ವೀಕರಿಸಲಾದ ಆಂತರಿಕ ಅಂಕಗಳನ್ನು ಸಮೀಕರಿಸಿ ಒಟ್ಟಾರೆ 100 ಅಂಕಗಳಿಗೆ ಗಳಿಸಿದ ಅಂಕಗಳನ್ನು ಪರಿಗಣಿಸಿ, ತೃತೀಯ ಭಾಷೆಗೆ ಪರ್ಯಾಯವಾಗಿ ಆಯ್ಕೆ ಮಾಡಿಕೊಂಡಿರುವ ವಿಷಯವನ್ನು ಒಳಗೊಂಡಂತೆ ಒಟ್ಟಾರೆ ವಿಷಯಗಳ ಫಲಿತಾಂಶವನ್ನು ಪ್ರಕಟಿಸಿ, ಜಂಟಿ ಪ್ರಮಾಣ ಪತ್ರ ನೀಡಲಾಗುವುದು.

ಈ ಯೋಜನೆಯಲ್ಲಿ ಆಯ್ಕೆ ಮಾಡಿಕೊಂಡ 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ಪರೀಕ್ಷಾ ಚಟುವಟಿಕೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಕ್ರಮವಹಿಸುವ ಪ್ರಾಧಿಕಾರಿಗಳ ವಿವರ ಈ ಕೆಳಕಂಡಂತಿದೆ.

5. Schedule of NSQF exams during the academic year 2023-24

| Sl. No. | Class | Level | Question Paper Provider | Exam To Be Conducted | Evaluation Work | Tabulation of results | Declaration Of Results | Certifica-tion | Month Of Exam | Remarks |
|---|---|---|---|---|---|---|---|---|---|---|
| 1 | IX | 1 | KSEAB | KSEAB | KSEAB | KSEAB | * KSEAB | KSEAB | February / March | Annual exam |
| 2 | X | 2 | KSEAB | KSEAB | KSEAB | KSEAB | * H.O.I will forward practical and internal assessment marks to KSEAB | Board (marks card) & Board + SSC (Certificate) | March / April | Annual exam |

* H.O.I Stands for :Head of the Institution

6. Skill Sector ನಲ್ಲಿ ಆಯ್ಕೆ ಮಾಡಿಕೊಂಡ ವಿಷಯಗಳ ಪರೀಕ್ಷಾ ನಿರ್ವಹಣಾ ವಿಧಾನಗಳು:

| ಕ್ರಮ ಸಂಖ್ಯೆ | ವಿವರ | ಗರಿಷ್ಠ ಅಂಕಗಳು | ಪರೀಕ್ಷಾ ನಿರ್ವಹಣೆಯ ಸಕ್ಷಮ ಪ್ರಾಧಿಕಾರ | |
|---|---|---|---|---|
| | | | 9ನೇ ತರಗತಿ | 10ನೇ ತರಗತಿ |
| 01 | ಆಂತರಿಕ ಮೌಲ್ಯಮಾಪನ | 20 | ಮುಖ್ಯ ಶಿಕ್ಷಕರು ಶಾಲಾ ಹಂತ | ಮುಖ್ಯ ಶಿಕ್ಷಕರು ಶಾಲಾ ಹಂತ |
| 02 | ಪ್ರಾಯೋಗಿಕ ಪರೀಕ್ಷೆ | 50 | ಮುಖ್ಯ ಶಿಕ್ಷಕರು ಶಾಲಾ ಹಂತ | Sector Skill Council Certified Assessor |
| 03 | ತಾತ್ವಿಕ ಪರೀಕ್ಷೆ | 30 | ಕೆ.ಎಸ್.ಇ.ಎ.ಬಿ | ಕೆ.ಎಸ್.ಇ.ಎ.ಬಿ |

7. ಉತ್ತೀರ್ಣತೆಯ ಮಾನದಂಡಗಳು

Weight age of marks shall be as follows:-

| Sl. No | Method of Assessments | Maximum & Minimum Qualifing Marks. | Methods to conduct Examination events | Assessing body /person |
|---|---|---|---|---|
| 1 | Written test | Max=30 marks minimun qualifying marks 10 | Theory examination shall be conducted for 60marks. 50% of the marks secured shall be calculated for tabulation & result processing to publish the result | Karnataka School Examination and Assessment Board. |
| 2 | Practical test & Oral test / viva voce | Max=50 marks minimum qualifying marks 18 | 30 marks-practical<br>10marks- viva<br>10marks- portpolio & assignment. | Certified Assessor by Sector Skill Council |

| | | | | |
|---|---|---|---|---|
| 3 | Internal Assessment | Max=20 marks<br>Minimum Qualifing marks is not prescribed. The Internal assessment marks obtained by the students will be included only if the student qualify individually in theory and practical as stated above. | 5 marks-Attendence<br>5 marks- Theory practical & oral test<br><br>5 marks – Activities<br>5 marks - Communication, Responsibility, Inter personal relationship, Health & Safety and Innovation and creativity | Vocational subject trainer |
| **Total** | | **100** | | |

08. ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ಯೋಜನೆಯ 1ನೇ ಮತ್ತು 2ನೇ ಹಂತದಲ್ಲಿ ವೃತ್ತಿ ಶಿಕ್ಷಣ ವಿಷಯದಲ್ಲಿನ ತಾತ್ವಿಕ ವಿಷಯಕ್ಕೆ 30 ಅಂಕಗಳು, ಪ್ರಾಯೋಗಿಕ ವಿಷಯಕ್ಕೆ 50 ಅಂಕಗಳಿದ್ದು, ವಿದ್ಯಾರ್ಥಿಯು ಉತ್ತೀರ್ಣರಾಗಲು ಕನಿಷ್ಠ 28 ಅಂಕಗಳನ್ನು ಗಳಿಸಬೇಕಾಗುತ್ತದೆ. ನಿಯಮಾನುಸಾರ ವಿದ್ಯಾರ್ಥಿಯು 28 ಅಂಕಗಳನ್ನು ಅಂದರೆ ತಾತ್ವಿಕ ವಿಷಯದಲ್ಲಿ 10 ಅಂಕಗಳನ್ನು ಮತ್ತು ಪ್ರಾಯೋಗಿಕ ವಿಷಯದಲ್ಲಿ 18 ಅಂಕಗಳನ್ನು ಗಳಿಸಿದರೆ ಮಾತ್ರ ಉತ್ತೀರ್ಣ ಎಂದು ಪರಿಗಣಿಸಲಾಗುತ್ತದೆ. ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ತೇರ್ಗಡೆಯಾಗಲು ಶಾಲಾ ಹಂತದಲ್ಲಿನ ಆಂತರಿಕ ಮೌಲ್ಯಮಾಪನದಲ್ಲಿ (Internal Assesement) ಇಂತಿಷ್ಟೆ ಕನಿಷ್ಠ ಅಂಕಗಳನ್ನು ಪಡೆಯಬೇಕು ಎಂಬ ನಿಯಮವಿರುವುದಿಲ್ಲ.

ತಾತ್ವಿಕ ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಕನಿಷ್ಠ ಅಂಕಗಳನ್ನು ಗಳಿಸಿ, ಉತ್ತೀರ್ಣರಾದರೆ ಮಾತ್ರ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪರಿಗಣಿಸಲಾಗುವುದು. ವಿದ್ಯಾರ್ಥಿಯು ಗಳಿಸಿದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಶಾಲಾ ಮುಖ್ಯಸ್ಥರು ತರಬೇತುದಾರರಿಂದ ಪಡೆದು ಪರೀಕ್ಷಾ ಮಂಡಳಿಗೆ ಕಾಲಮಿತಿ ನಿರ್ದೇಶನದಂತೆ ಸಲ್ಲಿಸಬೇಕಾಗುತ್ತದೆ.

09. ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ತೃತೀಯ ಭಾಷೆಯ ವಿನಾಯಿತಿ ನೀಡಿರುವುದರಿಂದ 3ನೇ ಭಾಷೆಯ ವೇಳಾಪಟ್ಟಿಯ ಅವಧಿಯಲ್ಲಿ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ವಿಷಯವನ್ನು ಬೋಧಿಸಲು ವೇಳಾಪಟ್ಟಿಯನ್ನು ಆಯಾ ಶಾಲಾ ಮುಖ್ಯ ಶಿಕ್ಷಕರು ಅಳವಡಿಸುವುದು. ಇನ್ನು ಹೆಚ್ಚಿನ ಅವಧಿಗಳು ಅಗತ್ಯವಿದ್ದಲ್ಲಿ ಶಾಲೆಯ ಪ್ರಾರಂಭದ ಅವಧಿಯ ಮುನ್ನ/ಶಾಲೆಯ ಅವಧಿ ಮುಗಿದ ನಂತರ/ಶನಿವಾರ/ಇನ್ನಿತರ ರಜಾ ದಿನಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಸ್ಥಳೀಯ ಅನುಕೂಲದ ಪ್ರಕಾರ ಹೆಚ್ಚಿನ ಅವಧಿಗಳನ್ನು ಅಳವಡಿಸುವ ಬಗ್ಗೆ ಮುಖ್ಯ ಶಿಕ್ಷಕರು ನಿರ್ಧರಿಸುವುದು. ಈ ಪ್ರಕಾರ ಹೆಚ್ಚಿನ ಅವಧಿಗಳನ್ನು ಸಿದ್ಧಪಡಿಸುವ ವೇಳಾಪಟ್ಟಿಯನ್ನು ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಂದ ಅನುಮೋದನೆಯನ್ನು ಪಡೆಯುವುದು.

10. ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಶಿಕ್ಷಕರಿಗೆ, ಎಸ್.ಡಿ.ಎಂ.ಸಿ. ಸದಸ್ಯರುಗಳಿಗೆ, ಉದ್ಯಮಿದಾರರಿಗೆ, ಶಾಲೆಯ ಸಿಬ್ಬಂದಿ ವರ್ಗದವರಿಗೆ ಶಾಲೆಯ ಪ್ರಾರಂಭದಲ್ಲಿ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ಯೋಜನೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಹಮ್ಮಿಕೊಳ್ಳುವ ಬಗ್ಗೆ ಶಾಲಾ ಮುಖ್ಯ ಶಿಕ್ಷಕರು ಕ್ರಮವಹಿಸುವುದು.

11. ಪರೀಕ್ಷಾ ಪದ್ಧತಿ, ಮೌಲ್ಯಮಾಪನ ಫಲಿತಾಂಶ ಪ್ರಕಟಣೆ, ಅಂಕಪಟ್ಟಿ ಹಾಗೂ ಇನ್ನಿತರ ಪರೀಕ್ಷಾ ವಿಷಯಗಳಿಗೆ ಮೇಲ್ಕಂಡಂತೆ ವಿವರಿಸಿರುವ ಪ್ರಕಾರ ಹಾಗೂ ಇನ್ನಿತರ ವಿಷಯಗಳಲ್ಲಿ ಪ್ರಸ್ತುತ ಇರುವ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ನಿಯಮಗಳನ್ನೇ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ಯೋಜನೆಗೆ ಅನ್ವಯಿಸಲಾಗುವುದು.

12. **Sector Skill** ನಲ್ಲಿ ಆಯ್ಕೆ ಮಾಡಿಕೊಳ್ಳುವ ವಿಷಯಗಳ ವಿಷಯ ಸಂಕೇತ ವಿವರ:-

| ಕ್ರಸಂ | ವಿಷಯ (Subject) | ವಿಷಯ ಸಂಕೇತ |
|---|---|---|
| | | Theory & Practical |
| 1 | ಮಾಹಿತಿ ತಂತ್ರಜ್ಞಾನ (Information Technology) | 86 |
| 2 | ರೀಟೇಲ್ (Retail) | 87 |
| 3 | ಆಟೋಮೊಬೈಲ್ (Auto mobile) | 88 |
| 4 | ಬ್ಯೂಟಿ ಮತ್ತು ವೆಲ್‌ನೆಸ್ (Beauty & Wellness)1 | 90 |
| 5 | ಅಪ್ಯಾರಲ್ಸ್, ಮೇಡ್ ಅಪ್ಸ್ & ಹೋಮ್ ಫರ್ನಿಷಿಂಗ್ (Apparels, Made ups and Home Furnishing) | 21 |
| 6 | ಎಲೆಕ್ಟ್ರಾನಿಕ್ಸ್ & ಹಾರ್ಡ್ವೇರ್ (Electronics and Hardware) | 22 |

ಮೇಲೆ ವಿವರಿಸಿರುವ ಎಲ್ಲಾ ಅಂಶಗಳನ್ನು ಪಾಲಿಸಿ ಈ ಯೋಜನಾ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಉಪನಿರ್ದೇಶಕರು(ಆಡಳಿತ)/ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

3/11/2023

(ಗೋಪಾಲಕೃಷ್ಣ.ಹೆಚ್.ಎನ್.)
ನಿರ್ದೇಶಕರು (ಪರೀಕ್ಷೆಗಳು)

3/11/23

**ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1. ರಾಜ್ಯದ ಆಯ್ದ 267 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ(ಪ್ರೌಢಶಾಲಾ ವಿಭಾಗ) (ಪರಿಶೀಲನಾ ಶಾಖೆಗಳ ಮೂಲಕ).
2. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ(ಪರಿಶೀಲನಾ ಶಾಖೆಗಳ ಮೂಲಕ).
3. ರಾಜ್ಯದ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ,.ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ(ಪರಿಶೀಲನಾ ಶಾಖೆಗಳ ಮೂಲಕ).
4. ರಾಜ್ಯದ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ) ಅವರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಬಗ್ಗೆ ಮಾಹಿತಿ ಹಾಗೂ ದೃಢೀಕರಣ ನೀಡಲು ತಿಳಿಸಿದೆ.
5. ಮಂಡಳಿಯಲ್ಲಿನ ಆಪ್ತ ಶಾಖೆಗೆ/ ಎಲ್ಲಾ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ
6. ಶಾಖಾಧಿಕಾರಿಗಳು, ಗಣಕ ಶಾಖೆ ರವರಿಗೆ ಎಸ್‌ಎಟಿಎಸ್ ಜಾಲತಾಣದಲ್ಲಿ ಮತ್ತು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.
7. ಶಿಕ್ಷಣ ವಾರ್ತೆ
8. ಕಛೇರಿ ಪ್ರತಿ.

**ಪ್ರತಿಯನ್ನು ಗೌರವಪೂರ್ವಕವಾಗಿ:-**

1. ಮಾನ್ಯ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ,
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ – ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ನಿರ್ದೇಶಕರು, ಅಂಗವಿಕಲ ಮತ್ತು ಹಿರಿಯ ನಾಗರೀಕ ಕಲ್ಯಾಣ ಇಲಾಖೆ, ಬೆಂಗಳೂರು.